“ಆಗಲಿಲ್ಲ ಮಂದಾಕಿನಿ. ಏಕೆ ಗೊತ್ತಾ? ನನ್ನ ಜೀವನದಲ್ಲಿ ಮೊದಲ ಬಾರಿಗೆ ಇಷ್ಟ ಪಟ್ಟ ಹೆಣ್ಣು ನೀವು. ಹದಿನಾರರ ಹುಚ್ಚುಕೋಡಿ ಮನಸ್ಸು ಹಚ್ಚಿಕೊಳ್ಳುವಂತೆ ಮಾಡಿತು. ನನಗೆ ನೀವು ನಿಮಗೆ ಗೊತ್ತಿಲ್ಲದೆ ಕನಸು ಕಾಣಲು ಕಲಿಸಿದಿರಿ. ನನ್ನ ಕನಸೇ ಆದಿರಿ. ಸಾಯಿಬಾಬಾ ಶಾಲೆಯಲ್ಲಿ ನಿಮ್ಮಲ್ಲಿ ಒಂದೇ ಒಂದು ಮಾತಾಡಲೂ ಸಾಧ್ಯವಾಗಲಿಲ್ಲ. ಈಗ ಮುಖತಃ ಮಾತಾಡಲು ಆಸೆಯಾಗಿದೆ. ನಾನು ಹಾರ್ಟ್ ಪೇಶೆಂಟ್ ಮಂದಾಕಿನಿ. ಅಷ್ಟು ದೂರ ಬರಲಾರೆ. ನೀವು ಸುಬ್ರಹ್ಮಣ್ಯಕ್ಕೆ ದೇವರ ದರ್ಶನಕ್ಕೆ ಬನ್ನಿ. ಅಲ್ಲಿಗೆ ಸಮೀಪ ನನ್ನ ಮನೆ.”

“ನನ್ನ ಪತಿರಾಯರೂ ಹಾರ್ಟ್ ಪೇಶೆಂಟೇ. ಅವರನ್ನು ಹೇಗೆ ಒಪ್ಪಿಸಲಿ? ಐವತ್ತು ವರ್ಷ ಮುಖ ನೋಡದೆ, ಒಂದೇ ಒಂದು ಮಾತಾಡದೆ ದಿನ ಕಳೆದೆವು. ಇನ್ನುಳಿದ ವರ್ಷಗಳೂ ಹಾಗೇ ಕಳೆದು ಹೋಗಲಿ.”

“ಇಲ್ಲ ಮಂದಾಕಿನಿ. ನಾನು ಇನ್ನು ಐದು ಕಾದಂಬರಿ ಬರೆಯಲಿಕ್ಕಿದೆ. ಅಷ್ಟು ವರ್ಷ ಬದುಕಬೇಕಾದರೆ ನಿಮ್ಮನ್ನೊಮ್ಮೆ ನೋಡಬೇಕು. ದಯವಿಟ್ಟು ಅರ್ಥ ಮಾಡಿಕೊಳ್ಳಿ.”

“ಆಗಲಿ ದೀಪಕ್, ಪ್ರಯತ್ನಿಸುತ್ತೇನೆ.''

★★★

ಪತಿಯನ್ನು ಒಡಂಬಡಿಸಲು ಗೌಡ್ತಿ ಅಮ್ಮನಿಗೆ ಮೂರು ತಿಂಗಳು ಹಿಡಿಯಿತು. ಗೌಡ್ತಿ ಅಮ್ಮ ತನ್ನದೇ ಎಸ್ಟೇಟಿನ ಕಾಫಿ ಬೀಜ, ಕಿತ್ತಲೆ ಹಣ್ಣು ಮತ್ತು ಶುಂಠಿ ಪೊಟ್ಟಣ ಮಾಡಿ ಕಾರಿನಲ್ಲಿಟ್ಟರು. ತಾನೇ ದಿನಾ ನೀರು ಹಾಕಿ ಬೆಳೆದ ವಿವಿಧ ಬಣ್ಣದ ಐದು ಗುಲಾಬಿಗಳನ್ನು ಕಟ್ಟು ಮಾಡಿದರು. ದಶಕಕ್ಕೆ ಒಂದರ ಹಾಗೆ ಐವತ್ತು ವರ್ಷಕ್ಕೆ ಐದು! ಒಂದಷ್ಟು ಕರ್ಜಿಕಾಯಿ, ಚಕ್ಕುಲಿ, ರವೆ ಉಂಡೆ ಮತ್ತು ಒಬ್ಬಟ್ಟು ಮಾಡಿ ಪೊಟ್ಟಣ ಮಾಡಿದರು. ಪತ್ನಿಯ ಸಂಭ್ರಮವನ್ನು ಪ್ರತಾಪಚಂದ್ರ ಅಸಹನೆಯಿಂದಲೇ ನೋಡುತ್ತಿದ್ದರು. ಕೊನೆಗೂ ಕಾರು ಹೊರಟಿತು.



ದೀಪಕ್ ಇದ್ದ ಊರು ತೀರಾ ಸಣ್ಣದು. ಅವನು ಎಲ್ಲರಿಗೂ ಪರಿಚಿತನಾದುದರಿಂದ ಮನೆ ಹುಡುಕುವುದು ಕಷ್ಟವಾಗಲಿಲ್ಲ. ಮನೆ ಚೊಕ್ಕವಾಗಿತ್ತು. ದೀಪಕನ ಪತ್ನಿ ಮತ್ತು ಇಬ್ಬರು ಮಕ್ಕಳು ಇವರನ್ನು ಎದುರುಗೊಂಡರು.

“ನಾನು ಮಂದಾಕಿನಿ, ಇವರು ನನ್ನ ಪತಿ ಪ್ರತಾಪಚಂದ್ರ. ಇದೆಲ್ಲಾ ನಿಮಗಾಗಿ ಈ ತಿಂಡಿಗಳನ್ನು ನಾನೇ ಮಾಡಿದ್ದು, ದೀಪಕ್ ಎಲ್ಲಿ?'' “ಮಂದಾಕಿನಿ ನೀವೇನಾ? ಈ ವಯಸ್ಸಲ್ಲೂ ನೋಡಲು ಚೆನ್ನಾಗಿದ್ದೀರಿ ಮೇಡಂ. ಅವರು ತಮ್ಮ